# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.

*ದಿನಾಂಕ 16/11/2019 ನೇ ಶನಿವಾರ ಬೆಳಗ್ಗೆ 11.30 ಗಂಟೆಗೆ ಸಮಿತಿಯ ಸಭಾಂಗಣದಲ್ಲಿ ಸಮಿತಿಯ ಅಧ್ಯಕ್ಷರಾದ ಶ್ರೀ ಜಯರಾಮ ಇವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಮಿತಿ ಸಭೆಯ ನಡವಳಿಗಳು.*

| ಕ್ರ.ಸಂ. | ಹಾಜರಿ | ಕ್ರ.ಸಂ. | ಗೈರುಹಾಜರಿ |
|---|---|---|---|
| 1 | ಶ್ರೀ ಜಯರಾಮ, ಅಧ್ಯಕ್ಷರು | 1 | ಶ್ರೀ ನಾಗರಾಜನಾಯ್ಕ ಎ.ಸಿ., ಸದಸ್ಯರು |
| 2 | ಶ್ರೀ ಟಿ.ಜಿ. ಕುಮಾರ್, ಉಪಾಧ್ಯಕ್ಷರು | 2 | ಶ್ರೀ ಆರ್. ಚಿಕ್ಕೇಗೌಡ, ಸದಸ್ಯರು |
| 3 | ಶ್ರೀಮತಿ ಮಂಜುಳ, ಸದಸ್ಯರು | | |
| 4 | ಶ್ರೀ ಜಯಕುಮಾರ ಎಂ.ಸಿ., ಸದಸ್ಯರು | | |
| 5 | ಶ್ರೀ ದೇವರಾಜು ಡಿ.ಜಿ., ಸದಸ್ಯರು | | |
| 6 | ಶ್ರೀ ಧರ್ಮಪ್ಪ ಸಿ.ಎನ್., ಸದಸ್ಯರು | | |
| 7 | ಶ್ರೀಮತಿ ಪಾರ್ವತಮ್ಮ, ಸದಸ್ಯರು | | |
| 8 | ಶ್ರೀ ಶಶಿಧರ ಎನ್.ಈ.,ಸದಸ್ಯರು | | |
| 9 | ಶ್ರೀ ಚಂದ್ರಶೇಖರ್ ಕೆ.ಎಸ್., ಸದಸ್ಯರು | | |
| 10 | ಶ್ರೀ ಶಶಿಕುಮಾರ್ ಹೆಚ್.ಸಿ., ಸದಸ್ಯರು | | |
| 11 | ಶ್ರೀ ಟಿ.ಎಸ್. ರುದ್ರಯ್ಯ, ಸದಸ್ಯರು | | |

*ವಿಷಯ 1):* *ಸಮಿತಿಯ ಹಿಂದಿನ ಸಾಮಾನ್ಯ ಸಭೆ/ ವಿಶೇಷ ಸಭೆ/ ಉಪ ಸಮಿತಿ ಸಭೆಗಳ ನಡವಳಿಗಳನ್ನು ಓದಿ ಒಪ್ಪಿ ದಾಖಲಿಸುವ ವಿಚಾರ.*

ತೀರ್ಮಾನ: ಸಮಿತಿಯು ದಿನಾಂಕ 16/08/2019 ರ ಸಾಮಾನ್ಯ ಸಭೆ, ದಿನಾಂಕ 01/10/2019 ರ ತುರ್ತು ವಿಶೇಷ ಸಭೆ ಹಾಗೂ ದಿನಾಂಕ 25/10/2019 ರ ಆಡಿಟ್ ಉಪ ಸಮಿತಿ ಸಭೆಯ ನಡವಳಿಗಳನ್ನು ಓದಿ ಒಪ್ಪಿ ದೃಢೀಕರಿಸಲಾಯಿತು.

*ವಿಷಯ 2):* *ಕೃಉಮಾಸ, ಅರಸೀಕೆರೆ – ಜುಲೈ 2019 ರಿಂದ ಆಗಸ್ಟ್ 2019 ನೇ ಮಾಹೆಯವರೆಗಿನ ಜಮಾ–ಖರ್ಚಿನ ತಃಖ್ತೆಯನ್ನು ದಿನಾಂಕ 25/10/2019 ರಂದು ಆಡಿಟ್ ಉಪ ಸಮಿತಿ ಸಭೆಯು ಒಪ್ಪಿರುವುದನ್ನು ಪರಿಶೀಲಿಸಿ ದೃಢೀಕರಿಸುವ ವಿಚಾರ.*

ತೀರ್ಮಾನ: ಸಮಿತಿಯ ಜುಲೈ 2019 ನೇ ಮಾಹೆಯಿಂದ ಆಗಸ್ಟ್ 2019 ನೇ ಮಾಹೆಯವರೆಗಿನ ಜಮಾ ಮತ್ತು ಖರ್ಚಿನ ತಃಖ್ತೆಯನ್ನು ದಿನಾಂಕ 25/10/2019 ರಂದು ನಡೆದ ಆಡಿಟ್ ಉಪ ಸಮಿತಿ ಸಭೆಯಲ್ಲಿ ವಿವರವಾಗಿ ಪರಿಶೀಲಿಸಿ ಒಪ್ಪಿರುವುದನ್ನು ದೃಢೀಕರಿಸಲಾಯಿತು.

*ವಿಷಯ 3):* *ಕೃಉಮಾಸ, ಅರಸೀಕೆರೆ – 2018–19 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದ ಇ–ಬ್ಲಾಕಿನಲ್ಲಿ, ಗಂಡಸಿ ಮತ್ತು ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಚರಂಡಿಯೊಂದಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಕಾಮಗಾರಿಯ (ಐಟಂವಾರು ಟೆಂಡರ್) ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ ಕೃಮಾಇ/ಕೃಉಮಾಸ(ಅರಸೀ)/433/2019–20 ದಿನಾಂಕ 28/06/2019 ರನ್ವಯ ಬಂದ ಟೆಂಡರ್‌ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಅರಸೀಕೆರೆ ಇವರು ತಯಾರಿಸಿಕೊಟ್ಟಿರುವ ತಾಂತ್ರಿಕ ಬಿಡ್‌ನ Evaluation Report ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.*

ತೀರ್ಮಾನ: ಈ ಸಮಿತಿಯ ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ/ಅರಸೀ/433/ 2019–20 ದಿನಾಂಕ 28/06/2019 ರಲ್ಲಿ ಕೃಉಮಾಸ, ಅರಸೀಕೆರೆ – 2018–19 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದ ಇ–ಬ್ಲಾಕಿನಲ್ಲಿ, ಗಂಡಸಿ ಮತ್ತು ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಚರಂಡಿಯೊಂದಿಗೆ



Jayarame

ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಿದ್ದು ಇದನ್ನು ಎರಡು ರಾಜ್ಯಮಟ್ಟದ ದಿನಪತ್ರಿಕೆಗಳಾದ 'ಹೊಸದಿಗಂತ', 'ಸಂಯುಕ್ತ ಕರ್ನಾಟಕ', ಒಂದು ರಾಜ್ಯಮಟ್ಟದ ಆಂಗ್ಲ ದಿನಪತ್ರಿಕೆ 'The Hindu' ಮತ್ತು ಎರಡು ಸ್ಥಳೀಯ ದಿನಪತ್ರಿಕೆಗಳಾದ 'ಜನಮಿತ್ರ' ಹಾಗೂ 'ಅಮೋಘವಾಣಿ' ಪತ್ರಿಕೆಗಳಲ್ಲಿ ದಿನಾಂಕ 04/07/2019 ರಲ್ಲಿನ ಪ್ರಕಟಣೆಯನುಸಾರ ಇ-ಟೆಂಡರ್ ಮುಖಾಂತರ ಸಲ್ಲಿಸಿದ್ದ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ಮಾನ್ಯ ಅಧೀಕ್ಷಕ ಅಭಿಯಂತರರು, ಮಾ.ಅ.ಯೋ., ಬೆಂಗಳೂರು ಇವರ ಪತ್ರ ಸಂಖ್ಯೆ ಕೃಮಾಇ/ಮಾಅಯೋ/ಟೆಂಡರ್/14762/2019-20 ದಿನಾಂಕ 23/10/2019 ರಲ್ಲಿನ ಅನುಮತಿ ಹಾಗೂ ಸೂಚನೆಯಂತೆ ಕೇಂದ್ರ ಕಛೇರಿಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ 10 ಜನ ಗುತ್ತಿಗೆದಾರರುಗಳ ಪೈಕಿ ಇಬ್ಬರು ಗುತ್ತಿಗೆದಾರರಾದ 1) ಶ್ರೀ ತಿಮ್ಮರಾಯಿಗೌಡ, 2) ಶ್ರೀ ಎಂ. ದಿನೇಶ್, ಮೆ॥ ಬೂಮ್ರ ಬ್ಯುಲ್ಡರ್ಸ್ ಇವರುಗಳು ಟೆಂಡರ್ ಅರ್ಹತಾ ಷರತ್ತುಗಳನ್ನು ಪೂರೈಸಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ನ್ನು ಅನುಮೋದಿಸಿ ಆರ್ಥಿಕ ಬಿಡ್ ತೆರೆಯಲು ಅನುಮತಿ ನೀಡಲಾದ ಮೇರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರು ತಾಂತ್ರಿಕ ಬಿಡ್‌ನ ಎವಾಲ್ಯೂಷನ್ ವರದಿ ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ದಿನಾಂಕ 04/11/2019 ಕಳುಹಿಸಿಕೊಟ್ಟಿರುವುದನ್ನು ಸಮಿತಿಯು ಈ ಕೆಳಕಂಡಂತೆ ವಿವರವಾಗಿ ಪರಿಶೀಲಿಸಿತು.

**:ಟೆಂಡರ್ ತುಲನಾತ್ಮಕ ತಃಖ್ತೆ:**

| ಕ್ರ. ಸಂ. | ಗುತ್ತಿಗೆದಾರರ ಹೆಸರು | 2018-19 ನೇ ಸಾಲಿನ ಅನುಮೋದಿತ ಶೆಡ್ಯೂಲ್ ಬಿ' ಪ್ರಕಾರ ಟೆಂಡರ್‌ಗಿಟ್ಟ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಬರುವ ಮೊತ್ತ | ಗುತ್ತಿಗೆದಾರರ ಮೊತ್ತವನ್ನು ಮತ್ತು ಟೆಂಡರ್‌ಗಿಟ್ಟ ಮೊತ್ತವನ್ನು ಹೋಲಿಸಿದಾಗ ಬರುವ ಶೇಕಡವಾರು ವಿವರ | ಷರಾ |
|---|---|---|---|---|---|
| 1 | ಶ್ರೀ ತಿಮ್ಮರಾಯಿಗೌಡ | 1,53,92,519=85 | 1,66,11,448=30 | 7.91 ರಷ್ಟು ಹೆಚ್ಚು | ಒಂದನೇ ಕಡಿಮೆ ದರ |
| 2 | ಶ್ರೀ ಎನ್. ದಿನೇಶ್ (BHOOMARA BUILDRES) | 1,53,92,519=85 | 1,69,31,550=96 | 9.99 ರಷ್ಟು ಹೆಚ್ಚು | ಎರಡನೇ ಕಡಿಮೆ ದರ |

ಸದರಿ ಕಾಮಗಾರಿಗೆ ಟೆಂಡರ್ ಸಲ್ಲಿಸಿದ್ದ ಗುತ್ತಿಗೆದಾರರುಗಳ ಪೈಕಿ Evaluation Report ಮತ್ತು ನಡವಳಿಗಳ ಅನುಸಾರ ಅರ್ಹರಿರುವ ಎರಡು ಜನ ತಾಂತ್ರಿಕ ಬಿಡ್‌ದಾರರಾದದ ಶ್ರೀ ತಿಮ್ಮರಾಯಿಗೌಡ ಮತ್ತು ಶ್ರೀ ಎನ್. ದಿನೇಶ್, ಬೂಮ್ರಾ ಬ್ಯುಲ್ಡರ್ಸ್ ಇವರುಗಳ ಪೈಕಿ ಶ್ರೀ ತಿಮ್ಮರಾಯಿಗೌಡ ಇವರು ನಮೂದಿಸಿರುವ ಐಟಂವಾರು ದರಗಳ ಒಟ್ಟು ಮೊತ್ತ ರೂ. 1,66,11,448=30 ಶೆಡ್ಯೂಲ್ 'ಬಿ' ಗೆ ಹೋಲಿಸಿದಾಗ ಶೇ. 7.91 ಹೆಚ್ಚಿನ ದರವಾಗಿದೆ (L1). ಸಮಿತಿಯು ಈ ದರಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು. ಟೆಂಡರ್ ದಾಖಲಾತಿಗಳನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಿಗೆ ತಾಂತ್ರಿಕ ವರ್ಗದವರ ಮೂಲಕ ಸಲ್ಲಿಸಿ ಮಂಜೂರಾತಿ ಪಡೆದು ಕಾರ್ಯಗತಗೊಳಿಸತಕ್ಕದೆಂದು ಒಪ್ಪಿ ತೀರ್ಮಾನಿಸಲಾಯಿತು.



Jayanna

ವಿಷಯ 4): *ಕೃಉಮಾಸ, ಅರಸೀಕೆರೆ ನಬಾರ್ಡ್– ಡಬ್ಲ್ಯೂ.ಐ.ಎಫ್. (ಹೆಚ್ಚುವರಿ) 2013–14 ಯೋಜನೆಯಲ್ಲಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಅಸ್ಸೇಯಿಂಗ್ ಲ್ಯಾಬ್ (ಧವಸಧಾನ್ಯಗಳ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಕ್ಕೆ) ಗೆ ಸಂಬಂಧಿಸಿದ ಪ್ರಯೋಗಾಲಯದ ಉಪಕರಣಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ 520/2019–20 ದಿನಾಂಕ 17/07/2019 ರನ್ವಯ ಬಂದ ಟೆಂಡರ್‌ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಅರಸೀಕೆರೆ ಇವರು ತಯಾರಿಸಿಕೊಟ್ಟಿರುವ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.*

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಈ ಸಮಿತಿಯ ಸಂಕ್ಷಿಪ್ತ ಪ್ರಕಟಣೆ ಸಂಖ್ಯೆ ಕೃಉಮಾಸ/520/2019–20 ದಿನಾಂಕ 17/07/2019 ರಲ್ಲಿ ಕೃಉಮಾಸ, ಅರಸೀಕೆರೆ ನಬಾರ್ಡ್– ಡಬ್ಲ್ಯೂ.ಐ.ಎಫ್. (ಹೆಚ್ಚುವರಿ) 2013–14 ಯೋಜನೆಯಲ್ಲಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಅಸ್ಸೇಯಿಂಗ್ ಲ್ಯಾಬ್ (ಧವಸಧಾನ್ಯಗಳ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಕ್ಕೆ) ಸಂಬಂಧಿಸಿದ ಪ್ರಯೋಗಾಲಯದ ಉಪಕರಣಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದ್ದು ಇದನ್ನು ಎರಡು ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆಗಳಾದ 'ಪ್ರಜಾವಾಣಿ', 'ಉದಯವಾಣಿ' ಮತ್ತು ಒಂದು ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆಯಾದ 'ಜನತಾಮಾಧ್ಯಮ' ದಿನಪತ್ರಿಕೆಗಳಲ್ಲಿ ದಿನಾಂಕ 23/07/2019 ರಲ್ಲಿನ ಪ್ರಕಟಣೆಯನುಸಾರ ಇ–ಟೆಂಡರ್ ಮುಖಾಂತರ ಸಲ್ಲಿಸಿದ್ದ ತಾಂತ್ರಿಕ ಬಿಡ್‌ನ್ನು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರ ಪತ್ರ ಸಂಖ್ಯೆ ಕೃಮಾಇ/ಸಕಾಇಂ/ನಂ6/ಉವಿ/ಮಾಅಯೋ/ಅರಸೀ/233/ 2019–20 ದಿನಾಂಕ 27/09/2019 ರ Evaluation Report ಮತ್ತು ಟೆಂಡರ್ ಪರಿಶೀಲನಾ ಸಭೆ ನಡವಳಿಗಳ ಅನ್ವಯ ಟೆಂಡರ್‌ನಲ್ಲಿ ಭಾಗವಹಿಸಿದ ಎಲ್ಲಾ ಮೂರು ಜನ ಗುತ್ತಿಗೆದಾರರುಗಳು ಅರ್ಹತಾ ಷರತ್ತುಗಳನ್ನು ಪೂರೈಸಿರುವುದರ ಮೇರೆಗೆ ಸದರಿ 3 ಜನ ಟೆಂಡರ್‌ದಾರರ ತಾಂತ್ರಿಕ ಬಿಡ್‌ನ್ನು ಅನುಮೋದಿಸಿ ಆರ್ಥಿಕ ಬಿಡ್ ತೆರೆಯಲಾಗಿದ್ದು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರು ತಾಂತ್ರಿಕ ಬಿಡ್‌ನ ಎವ್ಯಾಲ್ಯುಷನ್ ವರದಿ ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ದಿನಾಂಕ 28/10/2019 ರಂದು ತಯಾರಿಸಿಕೊಟ್ಟಿರುವುದನ್ನು ಸಮಿತಿಯು ಈ ಕೆಳಕಂಡಂತೆ ವಿವರವಾಗಿ ಪರಿಶೀಲಿಸಿತು.

## <u>ಟೆಂಡರ್ ತುಲನಾತ್ಮಕ ತಃಖ್ತೆ</u>

| ಕ್ರ.ಸಂ. | ಗುತ್ತಿಗೆದಾರರ ಹೆಸರು | 2016–17 ನೇ ಸಾಲಿನ ಅನುಮೋದಿತ ಶೆಡ್ಯೂಲ್ ಬಿ. ಪ್ರಕಾರ ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಬರುವ ಮೊತ್ತ | ಗುತ್ತಿಗೆದಾರರ ಮೊತ್ತವನ್ನು ಮತ್ತು ಟೆಂಡರ್‌ಗಿಟ್ಟ ಮೊತ್ತವನ್ನು ಹೋಲಿಸಿದಾಗ ಬರುವ ಶೇಕಡವಾರು ವಿವರ | ಷರಾ |
|---|---|---|---|---|---|
| 1 | ಶ್ರೀ ಗೋವಿಂದಪ್ಪ ರಮೇಶ್ | 50,98,000=00 | 44,52,247=70 | 12.66 ರಷ್ಟು ಕಡಿಮೆ | ಒಂದನೇ ಕಡಿಮೆ |
| 2 | ಶ್ರೀ ಸತೀಶ್‌ಕುಮಾರ್ ಕೆ.ಎಂ. | 50,98,000=00 | 54,37,693=00 | 6.66 ರಷ್ಟು ಹೆಚ್ಚು | ಎರಡನೇ ಕಡಿಮೆ |
| 3 | ಶ್ರೀ ಅನಂತಕೇಶವ ಸಿ. ಆರ್. | 50,98,000=00 | 74,45,000=00 | 46.03 ರಷ್ಟು ಹೆಚ್ಚು | ಮೂರನೇ ಕಡಿಮೆ |



Jayamma